

ಪಂಚಪಾಂಡವರು, ದ್ರೌಪದಿ ಸೇರಿದಂತೆ ಸ್ವರ್ಗಾರೋಹಣಕ್ಕೆ ನಡೆದು ಹೊರಟ ದಾರಿ ಈ ಚಾರಣದ ಮಾರ್ಗವೇ ಆಗಿದ್ದು, ಈ ದಾರಿಯಲ್ಲಿ ದ್ರೌಪದಿ ಮೊದಲುಗೊಂಡು ಒಬ್ಬೊಬ್ಬರೇ ಕೊನೆ ಉಸಿರೆಳೆದರೆನ್ನುವ ಜಾಗಗಳಿವೆ. ಕೊನೆಗೆ ಧರ್ಮರಾಯನೊಬ್ಬನೇ ಸಾಯದೆ ಉಳಿದು, ಅವನ ಜೊತೆ ಒಂದು ನಾಯಿಯೂ ಸೇರಿ ಸ್ವರ್ಗಾರೋಹಣ ಮಾಡಿದ ಕಥೆಯಿದೆ. ನಮ್ಮ ತಂಡ ಚಾರಣ ಹೊರಟ ದಾರಿಯೂ ಇದೇ.

ಹರಿದ್ವಾರದಿಂದ ಮುಂಜಾನೆಯೇ ಹೊರಟ ನಾವು, ಸಂಜೆ ಬದರೀನಾಥ ಕ್ಷೇತ್ರ ತಲುಪಿದೆವು. ಬದರಿ ವಿಶಾಲನ ದರ್ಶನಕ್ಕಾಗಿಯೂ, ಅಕ್ಲಮಟೈಸೇಷನ್‌ಗಾಗಿಯೂ ಇಡೀ ಒಂದು ದಿನ ಮೀಸಲಾಯಿತು. ಎತ್ತರದ ಜಾಗಗಳಲ್ಲಿ ಶ್ವಾಸಕೋಶಗಳು ಹೊಂದಾಣಿಕೆಯಾಗುವ ಸಮಯಾವಕಾಶವನ್ನು 'ಅಕ್ಲಮಟೈಸೇಷನ್' ಎನ್ನುತ್ತಾರೆ. ಬದರೀನಾಥ ಸಮುದ್ರ ಮಟ್ಟದಿಂದ 10,800 ಅಡಿ ಎತ್ತರದಲ್ಲಿದೆ. ಹಿಮಾಲಯದ ಕೊರೆಯುವ ಚಳಿಯ ಅನುಭವವೂ ಇಲ್ಲಿಂದಲೇ ಶುರು. ಬಾಯಿಯೊಳಗಿನ ದವಡೆಗಳು ಪರಸ್ಪರ ಕಟಕಟಿಸಿದವು! ಮರುದಿನ, ಹತ್ತಿರದಲ್ಲೇ ಇದ್ದ ಚರಣಪಾದುಕ ಎಂಬ ಜಾಗಕ್ಕೆ ಸೂರ್ಯೋದಯ ನೋಡಲು ನಸುಕಿನ ಐದು ಗಂಟೆಗೆ ಹೋದೆವು.

ಎರಡು ಬೆಟ್ಟಗಳ ಮಧ್ಯೆ ಕಾಣುವ ಬೃಹತ್ ನೀಲಕಂಠಪರ್ವತ ಶಿಖರವನ್ನು ಸಂಪೂರ್ಣ ಕುತ್ತಿಗೆ ಎತ್ತಿ ನೋಡಬೇಕು. ಉದಯ ಕಾಲದಲ್ಲಿ ಹೊನ್ನಿನ ರವಿಕಿರಣಗಳು ಶಿಖರದ ತುದಿಯನ್ನು, ಬಂಗಾರದ ಕಳಸವನ್ನಾಗಿಸುವುದನ್ನು ನೋಡುವುದೇ ಚೆನ್ನ. ಕೇವಲ 2–3 ನಿಮಿಷಗಳಲ್ಲಿ ನಡೆದುಹೋಗುವ ಘಟನೆಯಿದು. ಸತೋಪಂತ್ ಸರೋವರವು ನೀಲಕಂಠ ಪರ್ವತದ ಇನ್ನೊಂದು ಪಾರ್ಶ್ವದಲ್ಲಿದೆ. ಚರಣಪಾದುಕಾ ಜಾಗದಲ್ಲಿ ಸಣ್ಣದೊಂದು ನದಿ ಹರಿಯುತ್ತದೆ. ಅದನ್ನು 'ಋಷಿಗಂಗಾ' ಎಂದು ಕರೆಯುತ್ತಾರೆ.

ಎಲ್ಲರೂ ಅಲ್ಲಿಂದ ಹೊರಟು, ನೈಸರ್ಗಿಕ ಬಿಸಿನೀರಿನ ಬುಗ್ಗೆ 'ತಪ್ತಕುಂಡ'ದಲ್ಲಿ ಸ್ನಾನ ಮಾಡಿ, ಬದರಿ ವಿಶಾಲನ ದರ್ಶನ ಮಾಡಿ ನಾವು ಉಳಿದುಕೊಂಡಿದ್ದ ಜಾಗಕ್ಕೆ ಬಂದೆವು.

ಮರುದಿನ ಮುಂಜಾನೆ ನಮ್ಮನ್ನು ಚಾರಣಕ್ಕೆ ಕರೆದುಹೋಗುವ ಏಜೆನ್ಸಿಯವರು ಬಂದಿದ್ದರು. ನಮ್ಮ ಚಾರಣ 'ಮಾನ' ಹಳ್ಳಿಯಿಂದ ಬೆಳಿಗ್ಗೆ 8ಕ್ಕೆ ಶುರುವಾಯಿತು. ಈ ಹಳ್ಳಿಯಲ್ಲಿ, ಅಲಕಾನಂದ ನದಿ ದಾಟಲು ಸೇತುವೆ ನಿರ್ಮಿಸಿದ್ದಾರೆ. ಸೇತುವೆ ದಾಟಿದರೆ, ಮುಂದಿನದೆಲ್ಲವೂ ಕಾಲುದಾರಿ. ಈ ಜಾಗದಿಂದ ಸರಸ್ವತಿ ನದಿ ಅಲಕಾನಂದ ನದಿ ಸೇರುವ ಸಂಗಮವಾದ 'ಕೇಶವ ಪ್ರಯಾಗ' ಕಾಣಬಹುದು. ಮುಂದೆ ನಡೆದರೆ, ಗದ್ದೆಗಳಿವೆ, ಸಣ್ಣ ದೇವಿಗುಡಿಯಿದೆ. ಹಸು–ಕುರಿಗಳನ್ನು ಮೇಯಿಸುತ್ತಿರುವ ದೃಶ್ಯಗಳೂ ಕಾಣುತ್ತವೆ.

ಇನ್ನೂ ಕೊಂಚ ಮುಂದೆ ನಡೆದರೆ, ಅಲಕಾನಂದಾ ನದಿ ಕಣಿವೆ ಕಾಣುತ್ತದೆ. ನದಿ ಪಕ್ಕದಲ್ಲೇ ಕಾಲುದಾರಿಯಲ್ಲಿ ಸಾಗಬೇಕು. ನದಿ ಬದಿಯಲ್ಲೇ ನಡೆಯುತ್ತಿದ್ದ ನಮಗೆ ಭೋರ್ಗರೆವ ಸದ್ದೊಂದೇ ಜೊತೆಗಾರ. ಅಲ್ಲದೆ ಜೋರಾದ ಗಾಳಿಯ ಸದ್ದಿನಲ್ಲಿ ಜೊತೆಗಾರರ ಮಾತೂ ಕೇಳುವುದಿಲ್ಲ. ಎದುರಿನಲ್ಲೇ ಇದ್ದ ಬಾಲಕುನ್ ಶಿಖರವು ಮೌನವಾಗಿ ನಮ್ಮನ್ನೇ ಗಮನಿಸುತ್ತಿದೆಯೇನೋ ಎನಿಸಿತು.

ನದಿ ಹರಿವಿನ ಕಣಿವೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ನೂರಾರು ವರ್ಷಗಳ ಹಿಂದೆ ಆ ಕಣಿವೆ ಗ್ಲೇಸಿಯರ್ ಅಥವಾ ಹಿಮನದಿಯ ಕಣಿವೆಯಾಗಿದ್ದಿತು ಎಂದು ಖಚಿತವಾಗಿ ತೋರುತ್ತದೆ. ನಮ್ಮ ಗೈಡ್ ಹೇಳುವಂತೆ, ಹಿಮನದಿಯ ಕರಗುವಿಕೆಯಿಂದ ಮಾನ ಹಳ್ಳಿಯ ಜಾಗದಿಂದ ಲಕ್ಷ್ಮೀವನ ಎಂಬ ಜಾಗದವರೆಗೂ ಹಿಮನದಿ ಹಿಂದಕ್ಕೆ ಸರಿದಿದೆ. ಕೊಂಚ ಮುಂದೆ ನಡೆದರೆ ಸುಂದರ ಜಲಪಾತದ ದರ್ಶನವಾಗುತ್ತದೆ. ಈ ಜಲಪಾತಕ್ಕೆ 'ವಸುಧಾರ' ಎಂದು ಹೆಸರು. ಅಷ್ಟೇನೂ ದೊಡ್ಡದಲ್ಲದ ಜಲಪಾತ, ಸೂರ್ಯನ ಕಿರಣಗಳು ಜಲಪಾತದ ಹನಿಗಳ ಮೂಲಕ ಹಾದು ಸಪ್ತವರ್ಣದ ಕಾಮನಬಿಲ್ಲನ್ನು ಬಿಂಬಿಸಿತ್ತು. ಮುಂದೆ ಲಕ್ಷ್ಮೀವನವನ್ನು 6 ಗಂಟೆಗಳ ನಡಿಗೆಯಲ್ಲಿ ಅನಾಯಾಸವಾಗಿ ತಲುಪಿದೆವು. ಆಗಲೇ ಸಂಜೆ ಐದಾಗಿತ್ತು. ಎಲ್ಲರಿಗೂ ಹಸಿವಾಗಿತ್ತು. ಏಜೆನ್ಸಿಯವರು ಸಿದ್ಧಪಡಿಸಿದ್ದ ಡೇರೆಗಳಲ್ಲಿ ವಿಶ್ರಮಿಸಿದೆವು.

ಲಕ್ಷ್ಮೀವನ, ಅಲಕಾ ಹಾಗೂ ನಂದಾ ನದಿಗಳ ಸಂಗಮ ಜಾಗ. ಬೃಹತ್ ಬಾಲಕುನ್ ಪರ್ವತದ ಎರಡೂ ಬದಿಗಳಿಂದ ಕಾಣುವ ಗ್ಲೇಸಿಯರ್‌ಗಳಿಂದ ಕರಗಿ ಹರಿವ ನದಿಯೇ ಅಲಕಾನಂದಾ. ಈ ಸಂಗಮದ ತಟದಲ್ಲಿ ಭೋಜವೃಕ್ಷಗಳನ್ನು ನೋಡಿದೆವು. ನೂರಾರು ವರ್ಷಗಳ ಹಿಂದೆ ಭೋಜವೃಕ್ಷದ ತೊಗಟೆಯನ್ನೇ ಕಾಗದದಂತೆ ಬರೆಯುತ್ತಿದ್ದರು ಎಂಬ ವಿಷಯ ತಿಳಿಸಿದ ಗೈಡ್.

ಮರುದಿನ ಮುಂಜಾವಿನಲ್ಲೇ ಎಲ್ಲರೂ ಎದ್ದು ಮುಂದಿನ ಚಾರಣಕ್ಕೆ ಸಿದ್ಧವಾದೆವು.



ಬೃಹತ್ ಪರ್ವತಗಳ ನಡುವಿನ 'ಮಾನ' ಹಳ್ಳಿ